

# ಸಾಹಿತ್ಯದ ಮಿನುಗು ತಾರೆ

■ ಪ್ರವೀಣ ಕುಲಕರ್ಣಿ

ಭಾರತದ ಸಾಹಿತ್ಯ ಕ್ಷಿತಿಜದಲ್ಲಿ ಸದ್ಯ ಬೆಳಗುತ್ತಿರುವ ತಾರೆಗಳಲ್ಲಿ ಅಮಿತಾವ್ ಘೋಷ್ ಕೂಡ ಒಬ್ಬರು. ಭಾರತೀಯ ಸಾಹಿತ್ಯಕ್ಕೆ, ತನ್ಮೂಲಕ ವಿಶ್ವ ಸಾಹಿತ್ಯಕ್ಕೆ ಅವರು ಹಲವು ಕಾಣ್ಕೆಗಳನ್ನು ನೀಡಿದ್ದಾರೆ. ಕಥೆ ಹೇಳುವ ಅವರ ಶೈಲಿಯನ್ನು ಜಗತ್ತಿನ ಹಲವು ವಿಮರ್ಶಕರು ಮೆಚ್ಚಿಕೊಂಡಿದ್ದಾರೆ. ಅವರ 'ಸ್ಮೋಕ್ ಆ್ಯಂಡ್ ಆ್ಯಷಸ್: ಅಫೀಮ್ಸ್ ಹಿಡನ್ ಹಿಸ್ಟರೀಸ್' ಕೃತಿ ಈಗ ಬ್ರಿಟಿಷ್ ಅಕಾಡೆಮಿ ಬುಕ್ ಪ್ರಶಸ್ತಿಯ ಅಂತಿಮ ಸುತ್ತಿಗೆ ಆಯ್ಕೆಯಾಗಿದೆ. ಬಹುದೊಡ್ಡ ಬಹುಮಾನದ ಮೊತ್ತವನ್ನೂ, ಅಷ್ಟೇ ದೊಡ್ಡ ಮಾನ ಸನ್ಮಾನವನ್ನೂ ಹೊಂದಿರುವ ಈ ಪ್ರಶಸ್ತಿಗೆ ಪರಿಗಣನೆಯಾಗುವುದೇ ಒಂದು ದೊಡ್ಡ ಸಂಗತಿ. ಘೋಷ್ ಅವರ ಕೃತಿಯಲ್ಲಿ ಎಂತಹ ಹುರುಳಿದೆ ಎಂಬುದಕ್ಕೆ ಇದು ದ್ಯೋತಕ ಕೂಡ.

ಘೋಷ್ ಅವರು ಬೆಳೆದ ಪರಿಸರ ವೈವಿಧ್ಯದಿಂದ ಕೂಡಿದೆ. ಕೋಲ್ಕತ್ತದಲ್ಲಿ ಜನಿಸಿದ ಅವರು, ಭಾರತ, ಬಾಂಗ್ಲಾದೇಶ ಮತ್ತು ಶ್ರೀಲಂಕಾದಲ್ಲಿ ಬಾಲ್ಯವನ್ನು ಕಳೆದವರು. ಡೆಹ್ರಾಡೂನ್‌ನ ದಿ ಡಾನ್ ಶಾಲೆಯ ವಿದ್ಯಾರ್ಥಿಯಾದ ಅವರು, ರಾಮಚಂದ್ರ ಗುಹಾ, ವಿಕ್ರಂ ಸೇಠ್ ಅವರಂತಹ ಘಟಾನುಘಟಿ ಸಹಪಾಠಿಗಳನ್ನು ಹೊಂದಿದ್ದವರು. ಶಾಲಾ ದಿನಗಳಲ್ಲಿ ಈ ಮೂವರೂ ಸ್ನೇಹಿತರು ಎರಡು ಪತ್ರಿಕೆಗಳನ್ನು ಹೊರತರುತ್ತಿದ್ದರು. ಒಂದು ಸಾಹಿತ್ಯಕ್ಕೆ ಮೀಸಲಾದರೆ, ಮತ್ತೊಂದು ಚರಿತ್ರೆಯ ಕಥೆಗಳನ್ನು ಹೇಳಲು ಹುಟ್ಟಿಕೊಂಡಿದ್ದು. ಮುಂದೆ ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದ ಅವರು, ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಡಿ.ಫಿಲ್ ಮಾಡಿದರು. ಐಬಿಸ್ ಟ್ರೈಲಜಿ, ಸೀ ಆಫ್ ಪಪ್ಪೀಸ್, ರಿವರ್ ಆಫ್ ಸ್ಮೋಕ್, ಫ್ಲಡ್ ಆಫ್ ಫೈರ್ ತರಹದ ಕೃತಿಗಳನ್ನು ಕೊಡುಗೆಯಾಗಿ ಕೊಟ್ಟ ಅವರು, ರಾಯಲ್ ಸೊಸೈಟಿ ಆಫ್ ಲಿಟರೇಚರ್, ಫೋರ್ಡ್ ಫೌಂಡೇಷನ್‌ನ ಫೆಲೋ ಆಗಿಯೂ ಆಯ್ಕೆಯಾದವರು. ಸದ್ಯ ಅಮೆರಿಕದಲ್ಲಿ ನೆಲೆಸಿದ್ದಾರೆ.

'ಸ್ಮೋಕ್ ಆ್ಯಂಡ್ ಆ್ಯಷಸ್: ಅಫೀಮ್ಸ್ ಹಿಡನ್ ಹಿಸ್ಟರೀಸ್' ಕೃತಿ, 18ನೇ ಶತಮಾನದಿಂದ ಇಲ್ಲಿಯವರೆಗೆ ಅಫೀಮಿನ ವಹಿವಾಟಿನ ಆರ್ಥಿಕ ಹಾಗೂ ಸಾಮಾಜಿಕ ಪರಿಣಾಮಗಳನ್ನು ಕಟ್ಟಿಕೊಡುವ ಪ್ರಯತ್ನ ಮಾಡಿದೆ. ಖಂಡೋಲ್ಲಂಘನ ಮಾಡುತ್ತಾ, ಅಪ್ಪಿಕೊಂಡವರಿಗೆ ನಶೆ ಏರಿಸುತ್ತಾ ಹೊರಟ ಅಫೀಮಿನ ಹೆಜ್ಜೆ ಜಾಡಿನ ಮೇಲೆ ಟಾರ್ಚ್ ಬಿಟ್ಟು, ಕತ್ತಲ ಜಗತ್ತಿನ ಮೇಲೆ ಬೆಳಕು ಬೀರಿದ ಕೃತಿ ಇದು. ಅಪರಿಚಿತವಾದ ಲೋಕವೊಂದನ್ನು ಜಗತ್ತಿನ ಎದುರು ತೆರೆದಿಟ್ಟ ಕಾರಣದಿಂದ ಪ್ರಶಸ್ತಿಯ ಸುತ್ತಿನವರೆಗೆ ಹೋಗಿ ನಿಂತಿದೆ. ಖುಷಿಯ ಸಮಾಚಾರವೆಂದರೆ ಕಳೆದ ವರ್ಷ ಈ ಪ್ರಶಸ್ತಿಗೆ ಭಾಜನರಾದ ನಂದಿನಿ ದಾಸ್ ಕೂಡ ಭಾರತೀಯರು. ಅವರ 'ಕೋರ್ಟಿಂಗ್ ಇಂಡಿಯಾ: ಇಂಗ್ಲೆಂಡ್, ಮೊಘಲ್ ಇಂಡಿಯಾ ಆ್ಯಂಡ್ ದಿ ಒರಿಜಿನ್ಸ್ ಆಫ್ ಎಂಪೈರ್' ಕೃತಿ ಬ್ರಿಟಿಷ್ ಅಕಾಡೆಮಿ ಬುಕ್ ಪ್ರಶಸ್ತಿಯ ಕಿರೀಟವನ್ನು ತೊಟ್ಟಿತ್ತು. ದಾಸ್ ಕೂಡ ಬಂಗಾಳದವರೇ ಆಗಿದ್ದಾರೆ.

ಜ್ಞಾನಪೀಠ ಪುರಸ್ಕಾರಕ್ಕೂ ಪಾತ್ರರಾಗಿರುವ ಘೋಷ್, ಜನರ ಅಸ್ಮಿತೆಯ ಹುಡುಕಾಟವನ್ನೇ ತಮ್ಮ ಬರಹದ ವಸ್ತುವಾಗಿಸುತ್ತಾ ಬಂದವರು. ಕಾದಂಬರಿ ಮತ್ತು ಕಾದಂಬರಿಯೇತರ ಎರಡೂ ಪ್ರಕಾರಗಳಲ್ಲಿ ಕೃಷಿ ಮಾಡಿರುವ ಅವರು, ಚಾರಿತ್ರಿಕ ವಿವರಗಳನ್ನು ಇಟ್ಟುಕೊಂಡು ಹಲವು ಕಾದಂಬರಿಗಳನ್ನು ಬರೆದವರು. ವಸಾಹತುಶಾಹಿ ಮತ್ತು ಹವಾಮಾನ ಬದಲಾವಣೆ ವಿಷಯಗಳ ಮೇಲೂ ಅವರು ಕೃತಿ ಹೊರತಂದಿದ್ದಾರೆ. ದಿ ಸರ್ಕಲ್ ಆಫ್ ರೀಸನ್, ದಿ ಶಾಡೊ ಲೈನ್ಸ್, ದಿ ಕಲ್ಕತ್ತ ಕ್ರೊಮೊಸೋಮ್, ದಿ ಗ್ಲಾಸ್ ಪ್ಯಾಲೇಸ್, ದಿ ನಟ್‌ಮಗ್ಸ್ ಕರ್ಸ್ ಕೃತಿಗಳು ಘೋಷ್ ಅವರಿಗೆ ಅಪಾರವಾದ ಹೆಸರು ತಂದುಕೊಟ್ಟಂಥವು. ಅವರು ಹಲವು ಕೃತಿಗಳು ಜಗತ್ತಿನ ಮೂವತ್ತಕ್ಕೂ ಅಧಿಕ ಭಾಷೆಗಳಿಗೆ ಅನುವಾದಗೊಂಡಿವೆ.

ವಸಾಹತುಶಾಹಿ ಸಾಮ್ರಾಜ್ಯದ ವಿಸ್ತರಣೆಗೂ ಹವಾಮಾನ ವೈಪರೀತ್ಯಕ್ಕೂ ನೇರ ಸಂಬಂಧವಿದೆ ಎಂಬುದು ಘೋಷ್ ಅವರ ಖಚಿತ ಅಭಿಪ್ರಾಯ. ಸಾಮ್ರಾಜ್ಯದ ಸೇನೆ, ಪರಿವಾರದ ಬಿಡಾರಕ್ಕೆ ಸ್ಥಳಾವಕಾಶ ಕಲ್ಪಿಸಲು ಸಾವಿರಾರು ಹೆಕ್ಟೇರ್ ಪ್ರದೇಶದ ಅರಣ್ಯವನ್ನು ನಾಶಪಡಿಸಲಾಯಿತು. ಈ ಪರಿವಾರದ ಸಕಲ ಸವಲತ್ತುಗಳಿಗಾಗಿ ಕಾಡಿನ ಸಂಪತ್ತನ್ನು ಲೂಟಿ ಹೊಡೆಯಲಾಯಿತು ಎಂದು ಅವರು ವ್ಯಾಖ್ಯಾನಿಸುತ್ತಾರೆ. ಬಂಡವಾಳಶಾಹಿಯ ಅಪಾಯವನ್ನೂ ಅವರು ಗೋಡೆ ಮೇಲಿನ ಬರಹದಂತೆ ಓದುಗರಿಗೆ ಮನದಟ್ಟು ಮಾಡಿಕೊಡುವ ಪ್ರಯತ್ನ ಮಾಡುತ್ತಾರೆ. ಬಂಡವಾಳಶಾಹಿ ವ್ಯವಸ್ಥೆ ಎಂದರೆ ಕೈಗಾರಿಕೆಗಳ ಮಾಲೀಕತ್ವ ಖಾಸಗಿಯವರ ಕೈಯಲ್ಲಿರುವುದು ಎಂದರ್ಥ. ಖಾಸಗಿಯವರಿಗೆ ಯಾವಾಗಲೂ ಬೆಳವಣಿಗೆ ಮತ್ತು ಲಾಭವೇ ಮುಖ್ಯವಾಗಿರುವುದರಿಂದ ಪರಿಸರದ ಮೇಲಾಗುವ ಪರಿಣಾಮಗಳು ಅವರಿಗೆ ನಗಣ್ಯ. ಹೀಗಾಗಿ ಅವರಿಂದಲೂ ಹವಾಮಾನ ಬದಲಾವಣೆಗೆ ದೊಡ್ಡ ಕೊಡುಗೆ ಇದೆ ಎಂದು ಘೋಷ್ ವಿಶ್ಲೇಷಿಸುತ್ತಾರೆ.

ವಸಾಹತುಶಾಹಿಯ ಬಿಗಿಹಿಡಿತದಲ್ಲಿ ಸಿಕ್ಕಿದ್ದ ದೇಶಗಳ ಚರಿತ್ರೆಗಳನ್ನು ವಿಶೇಷವಾಗಿ ಅಧ್ಯಯನ ಮಾಡಿರುವ ಅವರು, ಆಗಿನ ಕಾಲದಲ್ಲಿ ವ್ಯಾಪಾರಕ್ಕೆ ಬಂದವರ ಎಲ್ಲ ಹುಳುಕುಗಳನ್ನು ಬಟಾಬಯಲು ಮಾಡುತ್ತಾರೆ. ಏಷ್ಯಾದ ಚರಿತ್ರೆಯನ್ನು ಅವರ ಬಾಯಿಯಿಂದ ಕೇಳಲು ಚರಿತ್ರೆಯ ಅಧ್ಯಯನಕಾರರು ಉಮೇದು ತೋರುತ್ತಾರೆ. ಅಫೀಮಿನ ಯಾತ್ರೆಯ ಕಥೆ ಚಾರಿತ್ರಿಕ ಅಂಶಗಳಿಂದ ಕೂಡಿದ್ದರೂ ಕಾದಂಬರಿಯಂತೆ ಓದಿಸಿಕೊಂಡು ಹೋಗುತ್ತದೆ ಮತ್ತು ಓದುಗನಿಗೆ ಏಕಕಾಲದಲ್ಲಿ ಚಾರಿತ್ರಿಕ ದಾಖಲೆಯ ಮೇಲೆ ಕಣ್ಣಾಡಿಸಿದ ಅನುಭವವನ್ನೂ ಒಂದು ರೋಚಕ ಕಾದಂಬರಿ ಓದಿದ ಖುಷಿಯನ್ನೂ ಕೊಡುತ್ತದೆ. ಘೋಷ್ ಅವರ ಬರವಣಿಗೆಯ ತಾಕತ್ತೇ ಅದಾಗಿದೆ. ಅಂತಹ ಘೋಷ್ ಅವರ ಈ ಕೃತಿಗೆ ಪ್ರಶಸ್ತಿ ದಕ್ಕೀತೆ? ಉತ್ತರಕ್ಕಾಗಿ ಇನ್ನೊಂದು ತಿಂಗಳು ಕಾಯಬೇಕು. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65